**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 260/2013** **CW-6 PW-3**

**ಸಾಕ್ಷಿಯನ್ನು ದಿಃ 06.05.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಪಾಂಡುರಂಗಸ್ವಾಮಿ |
| ತಂದೆಯ ಹೆಸರುಃ | ನಂಜುಂಡೇಗೌಡ |
| ವಯಸ್ಸುಃ | 46 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಜನಿವಾರ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ಸ್ಥಳ ಮತ್ತು ಅಮಾನತ್ತು ಮಹಜರ್ ಅನ್ನು ತೋರಿಸಲಾಗಿ, ಅದನ್ನು ಅವರು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನವೆಂಬರ್ 2012 ರ ಬೆಳಗ್ಗೆ 9.30 ಗಂಟೆ ಸಮಯದಲ್ಲಿ ಪೋಲೀಸರು ಗಲಾಟೆ ಸ್ಥಳಕ್ಕೆ ಬಂದಿದ್ದು, ಚಾಸಾ-2 ರವರು ಸ್ಥಳವನ್ನು ತೋರಿಸಿದ್ದು, ಸ್ಥಳದಲ್ಲಿ 2 ದೊಣ್ಣೆ ಮತ್ತು 1 ಮಚ್ಚು ಮು ಮಾ-1 ರಿಂದ 3 ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಪೋಲೀಸರು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ನನ್ನಿಂದ, ಚಾಸಾ-2 ಮತ್ತು ಚಾಸಾ-5 ರವರಿಂದ ಸಹಿ ಪಡೆದಿರುತ್ತಾರೆ. ಚಾಸಾ-5 ರವರು ಸುಮಾರು 6 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ಸ್ಥಳದಲ್ಲಿ ರಕ್ತದ ಕಲೆಗಳು ಸಹ ಇದ್ದವು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀಮತಿ ಎಮ್ ಎಮ್ ಎಸ್ ರವರಿಂದ**

ಪೋಲೀಸರು ಮಹಜರ್ ಗೆ ಬರುವಂತೆ ಯಾವುದೇ ನೋಟೀಸ್ ನೀಡಿಲ್ಲ. ಸದರಿ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ - ಶ್ರವಣಬೆಳಗೊಳ ರಸ್ತೆ, ಪಶ್ಚಿಮಕ್ಕೆ - ರಸ್ತೆ, ಉತ್ತರಕ್ಕೆ - ರಸ್ತೆ,

ದಕ್ಷಿಣಕ್ಕೆ- ಮನೆ ಇದೆ. ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮು ಮಾ-1 ರಿಂದ 3 ರ ವಸ್ತುಗಳು ಎಲ್ಲಾ ಕಡೆ ದೊರೆಯುತ್ತವೆ ಎಂದರೆ ಸರಿ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**